ಮಂಡ್ಯ ಜಿಲ್ಲಾ ಆಸ್ಪತೆಯಲ್ಲಿ "ತ್ರಾಮ್ ಕೇರ್ ಸೆಂಟರ್" ಕಾರ್ಯನಿರ್ವಹಣೆ

4493 (5314) : ಶ್ರೀ ಆತ್ಮಾನಂದ ಎಂ.ಎಸ್. (ಮಂಡ್ಯ) : ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಬೆಂಗಳೂರು–ಮೈಸೂರು ರಾಜ್ಯದ ಹೆದ್ದಾರಿ ಮಂಡ್ಯ ತಾಲ್ಲೂಕಿನ ಪರಿಮಿತಿಯಲ್ಲಿನ ವಾಹನ ಅಪಘಾತಗಳು ದಿನೇ ದಿನೇ ಅಧಿಕವಾಗುತ್ತಾ ಇರುವುದನ್ನು ಸರ್ಕಾರವು ಮನಗಂಡಿದೆಯೇ?

ಆ) ಹಾಗಿದ್ದಲ್ಲಿ ಜಿಲ್ಲಾ ಆಸ್ಪತ್ರೆ ಮಂಡ್ಯ ಇಲ್ಲಿ "ಟ್ರಾಮಕೇರ್ ಸೆಂಟರ್" ಇನ್ನೂ ಸಹ ಪೂರ್ಣ ಪ್ರಮಾಣದಲ್ಲಿ ಸಜ್ಜಾಗದೇ ಇರುವುದರಿಂದ, ಜನ ಸಾಮಾನ್ಯರಿಗೆ ತೊಂದರೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಇ) ಹಾಗಿದ್ದಲ್ಲಿ ಟ್ರಾಮಾಕೇರ್ ಸೆಂಟರ್ ಸಂಪೂರ್ಣ ಸಜ್ಜಾಗಿ ಪೂರ್ಣ ಪ್ರಮಾಣದಲ್ಲಿ ಕಾರ್ಯನಿರ್ವಹಿಸಲು ಅನುವು ಆಗುವಂತೆ ಯಾವ ಕ್ರಮ ಕೈಗೊಳ್ಳಲಾಗುವುದು?

ಶ್ರೀ ಕಾಗೋಡು ತಿಮ್ಮಪ್ಪ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು)

ಅ) ಹೌದು.

ಆ) ವಿಶ್ವಬ್ಯಾಂಕ್ ನೆರವಿನ ಕರ್ನಾಟಕ ಆರೋಗ್ಯ ವ್ಯವಸ್ಥೆಗಳ ಅಭಿವೃದ್ಧಿ ಯೋಜನೆಯಡಿ ಟ್ರಾಮಾಕೇರ್ ಸೆಂಟರ್ ಸೌಲಭ್ಯವನ್ನು ಮಂಡ್ಯ ಜಿಲ್ಲಾ ಆಸ್ಪತ್ರೆಯಲ್ಲಿ ಒದಗಿಸಲಾಗಿದೆ.

ಇ) ಉದ್ಭವಿರುವುದಿಲ್ಲ.

ರಾಜ್ಯದಲ್ಲಿನ ಪ್ರೌಢಶಾಲೆಗಳಲ್ಲಿ ಕೊಠಡಿ ಸಮಸ್ಯೆ

4494 (5315) : ಶ್ರೀ ಆತ್ಮಾನಂದ ಎಂ.ಎಸ್ .(ಮಂಡ್ಯ) : ಮಾನ್ಯ ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಹುಡ್ಕೋ ಅಥವಾ ನಬಾರ್ಡ್ ಸಹಾಯದಿಂದ ರಾಜ್ಯದಲ್ಲಿನ ಪ್ರೌಢಶಾಲೆಗಳಲ್ಲಿ ಕೊಠಡಿಗಳ ಕೊರತೆಯನ್ನು ನಿವಾರಿಸಲು ಸರ್ಕಾರವು ಕ್ರಮ ಕೈಗೊಂಡಿದೆಯೆ;

ಆ) ಕ್ರಮ ಕೈಗೊಂಡಿದ್ದಲ್ಲಿ ಅದರ ವಿವರಗಳೇನು;

ಇ) ಈ ಕಾರ್ಯಕ್ರಮವನ್ನು ಯಾವಾಗ ಅನುಷ್ಠಾನಗೊಳಿಸಲಾಗುವುದು;

ಈ) ಈ ಕಾರ್ಯಕ್ರಮ ಮಂಡ್ಯ ಜಿಲ್ಲೆಯಲ್ಲಿ ಸಹ ಅನುಷ್ಠಾನಗೊಂಡಲ್ಲಿ ಅದರ ವಿವರಗಳೇನು?

ಪ್ರೊ. ಬಿ.ಕೆ. ಚಂದ್ರಶೇಖರ್ (ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ರಾಜ್ಯ ಸಚಿವರು)

ಅ) ಕ್ರಮ ಕೈಗೊಂಡಿದೆ.

ಆ) ಹುಡ್ಕೋ ಆರ್ಥಿಕ ನೆರವಿನೊಂದಿಗೆ ಪ್ರೌಢ ಶಾಲೆಗಳಿಗೆ ಒಟ್ಟು 1328 ಕೊಠಡಿಗಳನ್ನು ನಿರ್ಮಿಸಲು, ನಬಾರ್ಡ್ ಯೋಜನೆಯಡಿ 2066 ಶಾಲಾ ಕೊಠಡಿಗಳನ್ನು ನಿರ್ಮಿಸಲು ಕ್ರಮ ಕೈಗೊಳ್ಳಲಾಗಿದೆ.

ಇ) ಹುಡ್ಕೋ ಮತ್ತು ನಬಾರ್ಡ್‌ನಿಂದ ಆರ್ಥಿಕ ನೆರವು ದೊರೆತ ಕೂಡಲೇ ಕಾರ್ಯಕ್ರಮವನ್ನು ಅನುಷ್ಠಾನಗೊಳಿಸಲಾಗುವುದು.

ಈ) ಮಂಡ್ಯ ಜಿಲ್ಲೆಗೆ ಹುಡ್ಕೋ ಯೋಜನೆಯಡಿ 63 ಕೊಠಡಿಗಳನ್ನು ಹಾಗೂ ನಬಾರ್ಡ್ ಯೋಜನೆಯಡಿ 68 ಕೊಠಡಿಗಳನ್ನು ನಿರ್ಮಿಸಲು ಉದ್ದೇಶಿಸಲಾಗಿದೆ.